# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ ಸದಸ್ಯರ ಹೆಸರು : | ಮಾನ್ಯ ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 1315 |
| ಉತ್ತರಿಸಬೇಕಾದ ದಿನಾಂಕ : | 21-12-2018 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಸೂರಿಲ್ಲದ ಬಡವರಿಗೆ ಸೂರು ಒದಗಿಸಲು ಮಂಜೂರಾದ ವಸತಿ ಯೋಜನೆಯ ಮನೆಗಳನ್ನು ಫಲಾನುಭವಿಗಳಿಗೆ ನೀಡದೆ ಕೆ.ಎಸ್.ಎಫ್.ಸಿ ಗೋದಾಮಿಗೆ ಬಾಡಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಬಂದಿದೆ.<br><br>ವಸತಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಯು ತಾನು ನಿರ್ಮಿಸಿಕೊಳ್ಳುವ ಮನೆಯನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಅವಕಾಶವಿದ್ದು, ವಾಸಯೇತರ ಉದ್ದೇಶಕ್ಕೆ ಬಳಸಿಕೊಳ್ಳಲು ಅವಕಾಶವಿರುವುದಿಲ್ಲ.<br><br>ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಯ ಮನೆ ನಿರ್ಮಾಣದ ಪ್ರಗತಿಯ ತಳಪಾಯ, ಗೋಡೆ, ಛಾವಣಿ ಮತ್ತು ಪೂರ್ಣ ಹಂತಗಳನ್ನು ಜಿ.ಪಿ.ಎಸ್. ತಂತ್ರಜ್ಞಾನದ ಮೂಲಕ ಪರಿಶೀಲಿಸಲಾಗುತ್ತಿದ್ದು, ಜಿ.ಪಿ.ಎಸ್. ಗೆ ಅಳವಡಿಸಲ್ಪಟ್ಟ ಪ್ರಗತಿಯ ಹಂತಗಳ ಛಾಯಾಚಿತ್ರಗಳನ್ನು ಅನುದಾನ ಬಿಡುಗಡೆಗೂ ಮುನ್ನ ನಿಗಮದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದ್ದು, ಒಂದು ವೇಳೆ ಫಲಾನುಭವಿಯು ನಿರ್ಮಿಸಿಕೊಳ್ಳುತ್ತಿರುವ ಮನೆಯು ವಾಸಯೇತರ ಮನೆ ಎಂದು ಕಂಡುಬಂದಲ್ಲಿ ಅಂತಹ ಜಿ.ಪಿ.ಎಸ್. ಛಾಯಾಚಿತ್ರವನ್ನು ವಾಸಯೇತರ ಮನೆ ( Non Residential ) ಎಂದು ಪರಿಗಣಿಸಿ, ಅನುದಾನ ಬಿಡುಗಡೆಯನ್ನು ತಡೆಹಿಡಿಯಲಾಗುತ್ತಿದೆ. |
| ಆ) | ಸದರಿ ವಸತಿಯೋಜನೆಯಡಿ ಮಂಜೂರಾದ ಮನೆಗಳನ್ನು ಗೋದಾಮಿಗೆ ಬಾಡಿಗೆ ನೀಡಿರುವುದು ಸರಿಯೇ; ಸದರಿ ವಸತಿಯೋಜನೆಯ ಮನೆಯಲ್ಲಿ ಕೆ.ಎಸ್.ಎಫ್.ಸಿ ರವರು ಗೋದಾಮು ಮಾಡಿದ ಬಗ್ಗೆ ಸಂಬಂಧಿಸಿದವರ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಜೊಯಿಡಾ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಜೋಯಿಡಾ ಗ್ರಾಮದಲ್ಲಿ 2015-16 ನೇ ಸಾಲಿನ ಬಸವ ವಸತಿ ಯೋಜನೆಯಡಿ ಆಯ್ಕೆಯಾಗಿರುವ ಫಲಾನುಭವಿಯಾದ ಶ್ರೀಮತಿ ಬೇಬಿ ದೇಸಾಯಿ ಕೋಂ ಅಪ್ಪಾಜಿ ದೇಸಾಯಿ (ಕೋಡ್ ಸಂಖ್ಯೆ: 381289) ರವರು ದಿನಾಂಕ: 19.12.2017 ರಂದು ಮನೆ ನಿರ್ಮಾಣವನ್ನು ಪೂರ್ಣಗೊಳಿಸಿಕೊಂಡಿದ್ದು, ರೂ.1,20,000/-ಗಳ ಸಹಾಯಧನವನ್ನು ಪಡೆದಿರುತ್ತಾರೆ. ಪೂರ್ಣಗೊಳಿಸಿಕೊಂಡ ನಂತರ ಸದರಿ ಮನೆಯನ್ನು ವಾಸಕ್ಕೆ ಬಳಸದೇ, ಕೆ.ಎಸ್.ಎಫ್.ಸಿ. ಗೋದಾಮಿಗೆ ಬಾಡಿಗೆಗೆ ನೀಡಿರುವುದು ದಿನಾಂಕ: 19.11.2018 ರಂದು ಗ್ರಾಮ ಪಂಚಾಯತಿಯ ಗಮನಕ್ಕೆ ಬಂದಿದ್ದು, ವಸತಿ ಯೋಜನೆಯಡಿ ಆಯ್ಕೆಯಾಗಿ ನಿರ್ಮಿಸಿಕೊಂಡಿರುವ ಮನೆಯನ್ನು ವಾಸಕ್ಕೆ ಬಳಸದೇ ಬಾಡಿಗೆಗೆ ನೀಡಿರುವುದಕ್ಕೆ ಸಂಬಂಧಿಸಿದಂತೆ ಫಲಾನುಭವಿಗೆ ದಿನಾಂಕ: 20.11.2018ರಂದು ನೋಟೀಸ್ ಜಾರಿಗೊಳಿಸಲಾಗಿರುತ್ತದೆ ಎಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಜೋಯಿಡಾ |

| | | |
|---|---|---|
| | | ಇವರು ತಿಳಿಸಿರುತ್ತಾರೆ.<br><br>ಈ ಪ್ರಕರರಣಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಉತ್ತರಕನ್ನಡಇವರಿಗೆ ನಿರ್ದೇಶನ ನೀಡಲಾಗಿರುತ್ತದೆ. |

ಕಡತ ಸಂಖ್ಯೆ: ವಇ 311 ಹೆಚ್‌ಎಎಂ 2018

(ಯು ಟಿ ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು